ಇವರಿಗೆ,

ಸನ್ಮಾನ್ಯ ನಿರ್ದೇಶಕರು

ಡಿ.ಎಸ್.ಇ.ಆರ್.ಟಿ.–ಬೆಂಗಳೂರು

ಮಾನ್ಯರೇ,

ವಿಷಯ: ಶಾಲಾ ಹಂತದಲ್ಲಿನ ಕೆಲವು ಗೊಂದಲಗಳಿಗೆ ಪರಿಹಾರವನ್ನು ನೀಡುವಂತೆ ಕೋರಿ,

ಉಲ್ಲೇಖ– ತಮ್ಮ ವಾಟ್ಸ್ ಅಪ್ ಸಂದೇಶದ ಮೇರೆಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಾಲಾ ಹಂತದಲ್ಲಿ ಶಿಕ್ಷಕರುಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳನ್ನು ಈ ಮೂಲಕ ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ದಯಮಾಡಿ ತಾವು ಅನ್ಯತಾ ಭಾವಿಸಬಾರದಾಗಿ ಪ್ರಾರ್ಥಿಸುತ್ತಿದ್ದೇನೆ.

1. ಕಿರಿಯ ಪ್ರಾಥಮಿಕ ಹಂತದಲ್ಲಿ ಮೌಲ್ಯಮಾಪನ 1 ರಿಂದ 3 ನೇ ತರಗತಿಯವರೆಗೆ ಒಂದು ರೀತಿಯಲ್ಲಿ (ನಲಿ–ಕಲಿ ಆಧಾರಿತ) 4 ನೇ ತರಗತಿಗೆ ಒಂದು ರೀತಿಯಲ್ಲಿ ( 15%+15%+20) 5 ನೇ ತರಗತಿಗೆ ಇನ್ನೊಂದು ರೀತಿಯಲ್ಲಿ (10%+10%+30) ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ 1 ರಿಂದ 5 ನೇ ತರಗತಿಯವರೆಗೆ ಕಿರಿಯ ಪ್ರಾಥಮಿಕ ಹಂತವಿದೆ. ಜೊತೆಗೆ ಬಹುಪಾಲು ಶಾಲೆಗಳಲ್ಲಿ 1–3 ನೇ ತರಗತಿಗಳನ್ನು ಒಬ್ಬ ಶಿಕ್ಷಕರು, 4 ಮತ್ತು 5ನೇ ತರಗತಿಗಳನ್ನು ಮತ್ತೊಬ್ಬ ಶಿಕ್ಷಕರು ನಿರ್ವಹಿಸುತ್ತಿದ್ದಾರೆ. ಇದಲ್ಲದೆ ದೈಹಿಕ ಶಿಕ್ಷಣ 1 ರಿಂದ 5 ನೇ ತರಗತಿಯವರೆಗೆ ಪಾರ್ಟ್ 'ಬಿ' ನಲ್ಲೂ, 6 ನೇ ತರಗತಿಯಿಂದ ಪಾರ್ಟ್ 'ಎ' ನಲ್ಲೂ ನಿರ್ವಹಿಸಲ್ಪಡುತ್ತಿದೆ. ಆದ್ದರಿಂದ ದಯಮಾಡಿ 1 ರಿಂದ 5 ನೇ ತರಗತಿಯವರೆಗೆ ಏಕ ರೂಪದಲ್ಲಿ (15%+15%+20) ಮೌಲ್ಯಮಾಪನವನ್ನು ಜಾರಿಗೆ ತಂದಲ್ಲಿ ಶಿಕ್ಷಕರ ಮೇಲಿನ ಹೊರೆ ತುಂಬಾ ಕಡಿಮೆ ಆಗುತ್ತದೆ.
2. ಈಗ ಕಿರಿಯ ಪ್ರಾಥಮಿಕ ಹಂತಕ್ಕೆ 3 ರೀತಿಯ ಪ್ರಗತಿ ಪತ್ರಗಳನ್ನು ವಿತರಿಸಲಾಗಿದೆ. 1 ರಿಂದ 3 ನೇ ತರಗತಿಗೆ **ನಲಿ–ಕಲಿ** ಆಧಾರಿತ ಪ್ರಗತಿ ಪತ್ರ, 1ರಿಂದ 4 ನೇ ತರಗತಿಗೆ **ನಲಿ–ಕಲಿಯೇತರ** ಪ್ರಗತಿ ಪತ್ರ , 5 ನೇ ತರಗತಿಗೆ ಪ್ರತ್ಯೇಕ ಪ್ರಗತಿ ಪತ್ರವನ್ನು ನೀಡಲಾಗುತ್ತಿದೆ. ಜೊತೆಗೆ 5 ನೇ ತರಗತಿಯಲ್ಲಿ ದೈಹಿಕ ಶಿಕ್ಷಣ ಪಾರ್ಟ್ 'ಬಿ' ನಲ್ಲಿದ್ದರೂ ಸಹ ಪಾರ್ಟ್ 'ಎ' ನಲ್ಲಿ ನೀಡಲಾಗಿದೆ. ಇದರಿಂದ ಗೊಂದಲ ಹೆಚ್ಚಾಗಿದೆ. ಇದರ ಬದಲು ನಲಿ–ಕಲಿಗೆ ಒಂದು ರೀತಿಯ, ನಲಿ–ಕಲಿಯೇತರ ಶಾಲೆಗಳನ್ನೂ ಸೇರಿಸಿಕೊಂಡು 1 ರಿಂದ 5 ನೇ ತರಗತಿಯವರೆಗೆ ಒಂದು ರೀತಿಯಲ್ಲಿ ಪ್ರಗತಿ ಪತ್ರ ನೀಡಿದರೆ ನಿರ್ವಹಣೆ ಸುಲಭವಾಗುತ್ತದೆ.
3. ಪಾರ್ಟ್ 'ಎ' ನಲ್ಲಿ ನೀಡಿರುವ ಕಲಾಶಿಕ್ಷಣ, ಕಾರ್ಯಾನುಭವ, ಕಂಪ್ಯೂಟರ್ ಶಿಕ್ಷಣವನ್ನು ಇದುವರೆಗೆ ಪಾರ್ಟ್ 'ಎ' ನಲ್ಲಿ ಸೇರಿಸಿರುವ ಸರ್ಕಾರಿ ಆದೇಶ ಇದುವರೆಗೆ ಬಂದಿಲ್ಲ. ಆದರೂ ಸದರಿ ವಿಷಯಗಳನ್ನು ಪಾರ್ಟ್ 'ಎ' ನಲ್ಲಿ ಸೇರಿಸಲಾಗಿದೆ. ಹಾಲಿ ಅವುಗಳಿಗೆ ಸಂಬಂಧಿಸಿದಂತೆ ಉತ್ತೀರ್ಣತೆ ನಿಯಮಗಳಾಗಲೀ, ಪಠ್ಯಪುಸ್ತಕಗಳಾಗಲೀ ಶಾಲೆಗಳಿಗೆ ಸರಬರಾಜಾಗಿರುವುದಿಲ್ಲ.
4. ಸಿ.ಸಿ.ಇ. ಯನ್ನು 1 ರಿಂದ 5 ನೇ ತರಗತಿಗೆ ಒಂದು ರೀತಿಯಲ್ಲಿ, 6 ರಿಂದ 7 ನೇ ತರಗತಿಗೆ ಒಂದು ರೀತಿಯಲ್ಲಿ, 8 ಮತ್ತು 9 ನೇ ತರಗತಿಗೆ ಒಂದು ರೀತಿಯಲ್ಲಿ ನಿಗದಿ ಪಡಿಸಿದರೆ ಆಗ ಕನಿಷ್ಟ ಒಬ್ಬರೇ ಶಿಕ್ಷಕರು ನಿರ್ವಹಿಸುತ್ತಿರುವ ವಿಷಯಗಳಿಗೆ ಏಕ ರೂಪತೆ ಇರುತ್ತದೆ.
5. ಭಾಷಾ ವಿಷಯಗಳಿಗೆ 5 'ಇ' ಗಳನ್ನು ಅಳವಡಿಸಿಕುಗಿ ಬಗ್ಗೆ ಇದುವರೆಗೆ ಸ್ಪಷ್ಟತೆ ಇರುವುದಿಲ್ಲ. ಇದರ ಬಗ್ಗೆ ಶಿಕ್ಷಕರಿಗೆ ಸೂಕ್ತ ತಿಳುವಳಿಕೆ ನೀಡಬೇಕಾಗಿದೆ.
6. ಕಳೆದ ವರ್ಷ ಇಡೀ ಶಾಲೆಗಳಿಗೆ ಸಿ.ಸಿ.ಇ ಬಗ್ಗೆ ಯಾವುದೇ ತರಬೇತಿ, ವಿಷಯ ಹಂಚಿಕೆ ಸಭೆಗಳು ನಡೆಯಲಿಲ್ಲ. ಯೂನಿಸೆಫ್ ನುದಾನದ ಕೈಪಿಡಿಗಳನ್ನು ನೀಡಲಾಯಿತಾದರೂ ಬದಲಾವಣೆ ಬಗ್ಗೆ ತರಬೇತಿ ಆಗಲೇ ಇಲ್ಲ. ಹಾಗಾಗಿ ಕೆಲವೆಡೆ –ಸಾಧನ ಪುಷ್ಠಿ 2013–14 ಆಧಾರಿತ, ಇನ್ನು ಕೆಲವೆಡೆ –ಸಾಧನ ಪುಷ್ಠಿ 2014–15 ಆಧಾರಿತ ಸಿ.ಸಿ.ಇ.ಅಳವಡಿಸಿಕೊಳ್ಳಲಾಗಿದೆ. ಈ ಸಾಲಿನಲ್ಲಾದರೂ ಇದರ ಬಗ್ಗೆ ಶೈಕ್ಷಣಿಕ ವರ್ಷದ ಮೊದಲಲ್ಲೇ ಕನಿಷ್ಟ ದೂರಸಂಪರ್ಕ ತರಬೇತಿಯನ್ನಾದರೂ ನೀಡಬೇಕಾಗಿದೆ.
7. ಈ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ನಲಿ–ಕಲಿ ಬಗ್ಗೆ ದೂರಸಂಪರ್ಕ ತರಬೇತಿ ಮೂಲಕ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡಬೇಕು.
8. ಕಳೆದ ವರ್ಷ ನಲಿ–ಕಲಿ ಮಕ್ಕಳಿಗೆ ಪ್ರಗತಿ ಪತ್ರವನ್ನೇ ವಿತರಿಸಲಿಲ್ಲ. ಇದರಿಂದಾಗಿ ಮಕ್ಕಳ ಪೋಷಕರಿಗೆ ಮಕ್ಕಳ ಪ್ರಗತಿಯನ್ನು ತಿಳಿಸಲು ಸಾಧ್ಯವಾಗಲೇ ಇಲ್ಲ. ಈ ಶೈಕ್ಷಣಿಕ ವರ್ಷದಲ್ಲಾದರೂ 1 ರಿಂದ 3 ನೇ ತರಗತಿಯ ಮಕ್ಕಳಿಗೆ ಪ್ರಗತಿ ಪತ್ರವನ್ನು ವಿತರಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಕೋರುತ್ತಿದ್ದೇನೆ.

9. ಡಿ.ಎಸ್.ಇ.ಆರ್.ಟಿ.ಯ ಪ್ರಕಟಣೆಗಳನ್ನು ಮಾರಾಟಕ್ಕೆ ನೀಡುವ ಯೋಜನೆ ಆದಷ್ಟೂ ಶೀಘ್ರ ಕಾರ್ಯರೂಪಕ್ಕೆ ಬಂದಲ್ಲಿ ಬಹಳಷ್ಟು ಸಹಾಯವಾಗುತ್ತದೆ.

10. ಸಿ.ಆರ್.ಪಿ., ಬಿ.ಆರ್.ಪಿ., ಶಿಕ್ಷಣ ಸಂಯೋಜಕರುಗಳಿಗೆ ನಲಿ–ಕಲಿ ಬಗ್ಗೆ ಸಿ.ಸಿ.ಇ. ಬಗ್ಗೆ, ಶಾಲೆಗಳಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಮಗ್ರ ತರಬೇತಿ ಆಗಬೇಕು.

11. ಉನ್ನತ ವ್ಯಾಸಂಗ ಮಾಡಿರುವ ಶಿಕ್ಷಕರುಗಳಿಗೆ ಸೂಕ್ತ ಪ್ರೋತ್ಸಾಹ ಧನ ನೀಡಿ ಅದಕ್ಕೆ ಪ್ರೋತ್ಸಾಹಿಸಬೇಕು.

12. ಪದವಿ ವ್ಯಾಸಂಗಕ್ಕೆ ಶಿಕ್ಷಕರುಗಳನ್ನು ಸಂಬಳ ಸಹಿತ ರಜೆ ನೀಡಿ ಕಳುಹಿಸುವ ಬದಲು (ಏಕೆಂದರೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮೂಲಕ ಪದವಿ ಪಡೆಯಲು ಅವಕಾಶ ಇದೆ) ಬಿ.ಎಡ್. ಪದವಿ ಪಡೆಯಲು ಸಂಬಳ ಸಹಿತ ರಜೆ ನೀಡಬೇಕು.

13. ಪಠ್ಯ ಪುಸ್ತಕ ಗಳನ್ನು ಪುನರ್ ಪರಿಶೀಲನೆಗೊಳಪಡಿಸಿ ಎಲ್ಲೆಲ್ಲಿ ರಚನಾವಾದ, ಜ್ಞಾನ ಕಟ್ಟಿಕೊಳ್ಳುವಿಕೆಗೆ ಅವಕಾಶ ಇಲ್ಲವೋ ಅಲ್ಲಿ ಅವಕಾಶ ಕಲ್ಪಿಸಿಕೊಡಬೇಕು. ಈಗ ಹೆಚ್ಚಿನ ಕಡೆ ಜ್ಞಾನವಲಯಕ್ಕೇ ಹೆಚ್ಚು ಒತ್ತು ನೀಡಲಾಗಿದೆ.

14. ಜೂನ್ ತಿಂಗಳಲ್ಲಿ ಸೇತುಬಂಧ ಕಾರ್ಯ ನಡೆಸಿದಂತೆಯೇ ನವೆಂಬರ್ ತಿಂಗಳಿನಲ್ಲೂ ಮೊದಲ ಸೆಮಿಸ್ಟರ್ ಆಧಾರಿತ ಸೇತುಬಂಧವನ್ನು ನಡೆಸಬೇಕು.

15. **2008 ರಲ್ಲಿ ಸರಬರಾಜು ಮಾಡಿರುವ ಮೂಲ ಸಾಮರ್ಥ್ಯಗಳ ಪಟ್ಟಿಯನ್ನು ಇದುವರೆಗೆ ಪರಿಷ್ಕರಣೆ ಮಾಡಿರುವುದಿಲ್ಲ.(ಶಾಲಾ ಶೈಕ್ಷಣಿಕ ಯೋಜನೆ) ತಕ್ಷಣ ಮಾಡಿಸಬೇಕು.**

16. ಶಾಲೆಗಳಲ್ಲಿ ಇರಿಸಬೇಕಾದ ದಾಖಲೆಗಳಿಗೆ ಸಂಬಂಧಿಸಿದಂತೆ ಒಂದು ಕೈಪಿಡಿಯನ್ನು ನೀಡಬೇಕು.

17. ಕಳೆದ ವರ್ಷ ಶಾಲೆಗಳಿಗೆ ವಿತರಿಸಿದ ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ವೇಳಾ ಪಟ್ಟಿಯನ್ನು ನೀಡಿದ್ದು ಅದರಲ್ಲಿ ಬೇರೆ ಬೇರೆ ತರಗತಿಗಳಿಗೆ ಬೇರೆ ಬೇರೆ ಸಮಯದ ವೇಳಾಪಟ್ಟಿಯನ್ನು ನೀಡಲಾಗಿದೆ. ಇದಕ್ಕೆ ಕಾರಣಗಳು ಸ್ಪಷ್ಟವಾಗಿಲ್ಲ.

18. ಅಂಗನವಾಡಿ ಅಥವಾ ಶಾಲಾ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ 1 ನೇ ತರಗತಿ ಪಠ್ಯವಿಷಯಗಳಿಗೆ ಪೂರಕವಾದ ಪಠ್ಯ ಸಿದ್ಧಗೊಳ್ಳಬೇಕು.

19. 1 ರಿಂದ 4 ನೇ ತರಗತಿಯ ಇಂಗ್ಲೀಷ್ ಪಠ್ಯಪುಸ್ತಕಗಳನ್ನು ಆಧರಿಸಿ 5 ನೇ ತರಗತಿಯ ಇಂಗ್ಲೀಷ್ ಪಠ್ಯಪುಸ್ತಕ ಸಿದ್ಧಗೊಳ್ಳಬೇಕು.

ನನ್ನ ತಿಳುವಳಿಕೆಯ ಆಧಾರದಲ್ಲಿ ಈ ಮೇಲಿನೆಲ್ಲ ಅಂಶಗಳನ್ನು ಪಟ್ಟಿ ಮಾಡಿದ್ದೇನೆ. ಬಹಳ ದಿನಗಳಿಂದ ಇವುಗಳು ನನ್ನ ಮನಸ್ಸಿನಲ್ಲಿ ಕೊರೆಯುತ್ತಿದ್ದವು. ತಾವು ಆದೇಶಿಸಿದ್ದರಿಂದ ಅವುಗಳನ್ನು ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇನೆ.

ಇಂತಿ ವಂದನೆಗಳೊಂದಿಗೆ,

ತಮ್ಮ ನಂಬುಗೆಯ

ರವೀಂದ್ರ.ಆರ್.ಡಿ.
ಶಿಕ್ಷಣ ಸಂಯೋಜಕ ಬಿ.ಇ.ಒ. ಕಛೇರಿ–ಕೊಪ್ಪ ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ, ದೂ:9480170849